# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 331
**ಮಾನ್ಯ ಸದಸ್ಯರ ಹೆಸರು** : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 18-07-2024
**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಪ್ರವಾಸೋದ್ಯಮವನ್ನು ಉತ್ತೇಜಿಸಲು 2019 ರಿಂದ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಮತ್ತು ಬಾಕಿ ಉಳಿದಿರುವ ಅನುದಾನ ಎಷ್ಟು; ಕೈಗೊಂಡ ಅಭಿವೃದ್ಧಿ ಯೋಜನೆಗಳಾವುವು; (ವಿವರವನ್ನು ತಾಲ್ಲೂಕುವಾರು ನೀಡುವುದು) | ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಇಲಾಖೆಯಿಂದ ಒಟ್ಟು 16 ಕಾಮಗಾರಿಗಳನ್ನು ರೂ.2626.12 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಈವರೆಗೂ ರೂ.2363.15 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.262.97 ಲಕ್ಷಗಳು ಬಾಕಿ ಉಳಿದಿರುತ್ತದೆ. ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| ಆ) | ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ವಿಫಲ ಅವಕಾಶಗಳಿದ್ದು, ಯಾವುದಾದರೂ ಹೊಸ ಯೋಜನೆಯನ್ನು ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಕೊಡಗು ಜಿಲ್ಲೆಯನ್ನೊಳಗೊಂಡಂತೆ ರಾಜ್ಯದ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ, ಸ್ಥಳೀಯರಿಗೆ ಜೀವನ ನಿರ್ವಹಣೆಗಾಗಿ ಅನುಕೂಲ ಕಲ್ಪಿಸಲು ಹಾಗೂ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮದ ವಿವರ ಈ ಕೆಳಕಂಡಂತಿದೆ.<br><br>➢ ಕೊಡಗು ಜಿಲ್ಲೆಯನ್ನು ಒಳಗೊಂಡಂತೆ ರಾಜ್ಯದ ಪ್ರವಾಸಿ ತಾಣಗಳ ಬಳಿ ಪ್ರವಾಸಿಗರಿಗೆ ಆತಿಥ್ಯ ಸೇವೆಯನ್ನು ಒದಗಿಸಲು ಮುಂದೆ ಬರುವ ಮನೆ ಮಾಲೀಕರುಗಳಿಗೆ ಹೋಂ ಸ್ಟೇ ಯೋಜನೆಯಡಿ ಇಲಾಖೆಯಿಂದ ನೋಂದಣಿ ಮಾಡಲಾಗುತ್ತಿದೆ.,<br><br>➢ ಕರ್ನಾಟಕ ಪ್ರವಾಸೋದ್ಯಮ ನೀತಿ 2020-26 ರಡಿಯಲ್ಲಿ ಕೊಡಗು ಪೂರ್ಣ ಜಿಲ್ಲೆಯನ್ನು ಆದ್ಯತಾ ಪ್ರವಾಸಿ ತಾಣವನ್ನಾಗಿ ಗುರುತಿಸಲಾಗಿದೆ.<br><br>➢ ಸದರಿ ನೀತಿಯಡಿ ಗುರುತಿಸಿರುವ ಈ ಕೆಳಕಂಡ 26 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗೀ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಇ) | ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಹೊಸ ಯೋಜನೆಗಳನ್ನು ಕೈಗೊಂಡು ಸ್ಥಳೀಯರಿಗೆ ಜೀವನ ನಿರ್ವಹಣೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಸರ್ಕಾರ ಮುಂದಾಗುವುದೇ? | |

| | | |
|---|---|---|
| | | 1. ಸಾಹಸ ಪ್ರವಾಸೋದ್ಯಮ ಯೋಜನೆ<br>2. ಕೃಷಿ ಪ್ರವಾಸೋದ್ಯಮ ಯೋಜನೆ<br>3. ಮನರಂಜನಾ ಪಾರ್ಕ್<br>4. ಕ್ಯಾರವಾನ್ ಪಾರ್ಕ್ ಯೋಜನೆ<br>5. ಕ್ಯಾರವಾನ್ ಪ್ರವಾಸೋದ್ಯಮ ಯೋಜನೆ<br>6. ಸಮಾವೇಶ ಕೇಂದ್ರ<br>7. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ<br>8. ಸಾಂಸ್ಕೃತಿಕ ಗ್ರಾಮ<br>9. ಪರಿಸರ ಪ್ರವಾಸೋದ್ಯಮ ಯೋಜನೆ.<br>10. ಪಾರಂಪರಿಕ ಹೋಟೆಲ್<br>11. ಪಾರಂಪರಿಕ ಪ್ರವಾಸೋದ್ಯಮ ಯೋಜನೆ<br>12. ಪಾರಂಪರಿಕ ನಡಿಗೆ<br>13. ಹೋಂಸ್ಟೇ<br>14. ಹೋಟೆಲ್ ಯೋಜನೆ (ಬಜೆಟ್)<br>15. ಹೋಟೆಲ್ ಯೋಜನೆ (ಪ್ರೀಮಿಯಂ)<br>16. ಹೌಸ್‌ಬೋಟ್ ಯೋಜನೆ<br>17. ವಸ್ತು ಸಂಗ್ರಹಾಲಯಗಳು ಮತ್ತು ಗ್ಯಾಲರಿಗಳು<br>18. ರೋಪ್ ವೇ<br>19. ಸುರಕ್ಷತೆ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ<br>20. ಧ್ವನಿ ಮತ್ತು ಬೆಳಕಿನ ದರ್ಶನ<br>21. ಟೆಂಟ್ ವಸತಿ ಸೌಕರ್ಯ<br>22. ಥೀಮ್ ಪಾರ್ಕ್<br>23. ಪ್ರವಾಸಿ ವಿವರಣಾ ಕೇಂದ್ರ<br>24. ಪ್ರವಾಸಿ ಲಕ್ಷುರಿ ಕೋಚ್<br>25. ಸ್ವಾಸ್ಥ್ಯ ಕೇಂದ್ರ<br>26. ರಸ್ತೆ ಬದಿ ಸೌಲಭ್ಯಗಳು<br><br>ಮೇಲ್ಕಂಡ ಪ್ರವಾಸಿ ಉತ್ಪನ್ನಗಳಲ್ಲಿ ಖಾಸಗೀ ಹೂಡಿಕೆದಾರರು ಬಂಡವಾಳ ಹೂಡಿಕೆ ಮಾಡುವ ಮೂಲಕ ಹೆಚ್ಚುವರಿ ಪ್ರವಾಸಿ ಸೌಲಭ್ಯಗಳೊಂದಿಗೆ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. |

**ಸಂಖ್ಯೆ:ಟಿಓಆರ್ 157 ಟಿಡಿವಿ 2024**

**(ಎಚ್.ಕೆ.ಪಾಟೀಲ್)**

ಕಾನೂನು, ನ್ಯಾಯ, ಮಾನವ ಹಕ್ಕುಗಳು,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ
ಹಾಗೂ ಪ್ರವಾಸೋದ್ಯಮ ಸಚಿವರು

## ಅನುಬಂಧ

## ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳಿಗೆ ಈವರೆಗೆ ಬಿಡುಗಡೆ ಮಾಡಿರುವ ಅನುದಾನದ ವಿವರ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಬಾಕಿ | ಷರಾ |
|---|---|---|---|---|---|---|---|
| | **ಕೊಡಗು ಜಿಲ್ಲೆ** | | | | | | |
| 1 | ಮಡಿಕೇರಿಯಲ್ಲಿ ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ (2008-09) (ಬಂಡವಾಳ ವೆಚ್ಚಗಳು) | 2008-09 | 330.45 | ಲೋಕೋಪಯೋಗಿ ಇಲಾಖೆ | 330.45 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 2 | ಮಡಿಕೇರಿಯ ರಾಜಾಸೀಟ್ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆ. (2014-15) (ಬಂಡವಾಳ ವೆಚ್ಚಗಳು) | 2014-15 | 455.00 | ಲೋಕೋಪಯೋಗಿ ಇಲಾಖೆ | 371.25 | 83.75 | ಕಾಮಗಾರಿ ಪೂರ್ಣಗೊಂಡಿದೆ. |
| 3 | ಸೋಮವಾರಪೇಟೆ ತಾಲ್ಲೂಕು, ಮಲ್ಲಳ್ಳಿ ಜಲಪಾತ ಪ್ರದೇಶದಲ್ಲಿ ಬಾಕಿ ಇರುವ ಮೆಟ್ಟಿಲುಗಳ ನಿರ್ಮಾಣ, ರೈಲಿಂಗ್ಸ್, ಪಾರ್ಕಿಂಗ್, ಮಳಿಗೆ ಮುಂತಾದ ಸೌಲಭ್ಯಗಳ ನಿರ್ಮಾಣ (2016-17) | 2016-17 | 192.92 | ಕೆಆರ್ ಐಡಿಎಲ್ | 160.00 | 32.92 | ವಾಚ್‌ಟವರ್ ಮತ್ತು ಇಂಟರ್ ಲಾಕ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿದೆ. |
| 4 | ಕೊಡಗು ಜಿಲ್ಲೆಯ ದುಬಾರೆ ಬಳಿ ಕಾವೇರಿ ನದಿ ತೀರದ ಬಳಿ ಪಾರ್ಕಿಂಗ್ ಸೌಲಭ್ಯ ಅಭಿವೃದ್ಧಿ (2016-17) | 2016-17 | 102.00 | ಲೋಕೋಪಯೋಗಿ ಇಲಾಖೆ | 76.50 | 25.50 | ಕಾಮಗಾರಿ ಪೂರ್ಣಗೊಂಡಿದೆ. |
| 5 | ಕೊಡಗು ಜಿಲ್ಲೆಯ ಕೆಂಪುರಾಶಿ ಮೊಟ್ಟೆಯಿಂದ ಮಂಟಕಲ್ ಶಾಲೆವರೆಗೆ 2.00 ಕಿ.ಮೀ ರಸ್ತೆ ಅಭಿವೃದ್ಧಿ (ತಲಕಾವೇರಿ ಬದಲಿ ಸಂಪರ್ಕ ರಸ್ತೆ) (2017-18) | 2017-18 | 300.00 | ಲೋಕೋಪಯೋಗಿ ಇಲಾಖೆ | 225.00 | 75.00 | ಕಾಮಗಾರಿ ಪೂರ್ಣಗೊಂಡಿದೆ. |
| 6 | ಮಡಿಕೇರಿಯಲ್ಲಿರುವ ಶ್ರೀ ಓಂಕಾರೇಶ್ವರ ದೇವಸ್ಥಾನದ ಬಳಿ ಶೌಚಾಲಯ ಬಟ್ಟೆ ಬದಲಿಸುವ ಕೊಠಡಿ ನಿರ್ಮಾಣ (2018-19) | 2018-19 | 36.60 | ಕೆಆರ್ ಐಡಿಎಲ್ | 36.60 | 0.00 | ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ. |
| 7 | ಮಡಿಕೇರಿ ತಾಲ್ಲೂಕು ನಾಲ್ಕುನಾಡು ಅರಮನೆ ಸಂಪರ್ಕ ರಸ್ತೆ ಅಭಿವೃದ್ಧಿ (ಸಿ.ಸಿ.ರಸ್ತೆ) (2018-19) | 2018-19 | 300.00 | ಲೋಕೋಪಯೋಗಿ ಇಲಾಖೆ | 300.00 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 8 | ಸೋಮವಾರಪೇಟೆ ತಾಲ್ಲೂಕು, ಶನಿವಾರ ಸಂತೆ ಹೋಬಳಿ, ತಪೋವನ ಮನೆಹಳ್ಳಿ ಶ್ರೀ ಕಾಡುಮಲ್ಲೇಶ್ವರ ದೇವಸ್ಥಾನದಿಂದ ಅಜ್ಜಯ್ಯ ವೀರಭದ್ರ ಮಠಕ್ಕೆ ಹೋಗುವ ರಸ್ತೆ ಅಭಿವೃದ್ಧಿ (2019-20) | 2019-20 | 100.00 | ಲೋಕೋಪಯೋಗಿ ಇಲಾಖೆ | 100.00 | 0.00 | ಕಾಮಗಾರಿ ಪ್ರಗತಿಯಲ್ಲಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾಮಗಾರಿಯ ಹೆಸರು | ಮಂಜೂರಾದ ವರ್ಷ | ಅಂದಾಜು ಮೊತ್ತ | ಅನುಷ್ಠಾನ ಸಂಸ್ಥೆ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಬಾಕಿ | ಷರಾ |
|---|---|---|---|---|---|---|---|
| 9 | ಮಡಿಕೇರಿಯ ರಾಜಾಸೀಟಿಗೆ ತೆರಳುವ ರಸ್ತೆಗೆ ಪಾತ್‌ವೇ, ರೈಲಿಂಗ್ಸ್ ನಿರ್ಮಾಣ ಕಾಮಗಾರಿ. | 2019-20 | 45.19 | ಲೋಕೋಪಯೋಗಿ ಇಲಾಖೆ | 45.19 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 10 | ಮಡಿಕೇರಿಯ ರಾಜಾಸೀಟು ಬಳಿ ಕೂರ್ಗ್ ವಿಲೇಜ್/ ಕೊಡಗು ಶಾಪಿಂಗ್ ಕೇಂದ್ರ ಕಾಮಗಾರಿ ನಿರ್ಮಾಣ | 2019-20 | 98.50 | ನಿರ್ಮಿತಿ ಕೇಂದ್ರ | 98.50 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 11 | ಕೊಡಗು ಜಿಲ್ಲೆಯ ಅಬ್ಬಿ ಫಾಲ್ಸ್ ಪ್ರದೇಶದಲ್ಲಿ 300 ಮೀ. ಸಿ.ಸಿ. ರಸ್ತೆ, ಪಾರ್ಕಿಂಗ್ ಸೌಲಭ್ಯ ಹಾಗೂ ಮಳೆನೀರು ಚರಂಡಿ ನಿರ್ಮಾಣ | 2019-20 | 174.13 | ಕೆಆರ್ ಐಡಿಎಲ್ | 174.13 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 12 | ಕೊಡಗು ಜಿಲ್ಲೆಯ ಮಾಂದಲಪಟ್ಟಿ ಗ್ರಾಮದ ಕಾಲೂರು ಕರೇನ ಮನೆಯಿಂದ ಮಾಂದಲ್ ಪಟ್ಟಿಗೆ ಹೋಗುವ ಸಿ.ಸಿ. ರಸ್ತೆ ಕಾಮಗಾರಿ | 2019-20 | 199.00 | ಕೆಆರ್ ಐಡಿಎಲ್ | 199.00 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 13 | ಮಡಿಕೇರಿಯ ಶ್ರೀ ಓಂಕಾರೇಶ್ವರ ದೇವಸ್ಥಾನದ ಬಳಿ 100 ಮೀಟರ್ ಸಿ.ಸಿ. ರಸ್ತೆ ನಿರ್ಮಾಣ ಮತ್ತು ಪಾರ್ಕಿಂಗ್ ಲಾಟ್ ಅಭಿವೃದ್ಧಿ. | 2019-20 | 40.80 | ಕೆಆರ್ ಐಡಿಎಲ್ | 20.00 | 20.80 | ಕಾಮಗಾರಿ ಪ್ರಗತಿಯಲ್ಲಿದೆ. |
| 14 | ಕುಶಾಲನಗರದ ದುಬಾರೆಯಲ್ಲಿ ಕಾವೇರಿ ನದಿ ಬಳಿ ಸೋಪಾನಕಟ್ಟೆ ಹಾಗೂ ಜಟ್ಟಿ ನಿರ್ಮಾಣ. | 2019-20 | 123.53 | ಲೋಕೋಪಯೋಗಿ ಇಲಾಖೆ | 123.53 | 0.00 | ಕಾಮಗಾರಿ ಪೂರ್ಣಗೊಂಡಿದೆ. |
| 15 | ಕುಶಾಲನಗರದ ದುಬಾರೆಯಲ್ಲಿ ಪಾರ್ಕಿಂಗ್ ಸೌಲಭ್ಯ ನಿರ್ಮಾಣ (ಭಾಗ-2) | 2019-20 | 103.00 | ಲೋಕೋಪಯೋಗಿ ಇಲಾಖೆ | 103.00 | 0.00 | ಕಾಮಗಾರಿ ಅಂತಿಮ ಹಂತದಲ್ಲಿದೆ. |
| 16 | ಕೊಡಗು ಜಿಲ್ಲೆ ಕುಶಾಲನಗರ ಪಟ್ಟಣದ ಸೋಮೇಶ್ವರ ಕೆರೆಯನ್ನುಯನ್ನು ಪ್ರವಾಸಿ ತಾಣವನ್ನಾಗಿ ಮಾಡುವುದು | 2022-23 | 25.00 | ಕೆಟಿಐಎಲ್ | 0.00 | 25.00 | ಕಾಮಗಾರಿ ಪ್ರಾರಂಭಿಸಬೇಕಿದೆ. |
| | ಒಟ್ಟು | | **2626.12** | | **2363.15** | **262.97** | |